# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2005 |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 16.03.2022 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| (ಅ) | ಸಂಡೂರು ಇನಾಂ ಅಬಾಲಿಷನ್ ಆಕ್ಟ್ ಯಾವ ವರ್ಷದಲ್ಲಿ ಜಾರಿಗೆ ಬಂದಿದೆ; ಇದರ ಉದ್ದೇಶಗಳೇನು; [ಈ ಆಕ್ಟ್ ಆದೇಶದ ಪ್ರತಿ ಹಾಗೂ ವಿವರ ನೀಡುವುದು] | ಕರ್ನಾಟಕ [ಸಂಡೂರು ಪ್ರದೇಶ] ಇನಾಂ ರದ್ದಿಯಾತಿ ಅಧಿನಿಯಮ, 1976 ದಿನಾಂಕ: 08.11.1976 ರಂದು ಜಾರಿಗೆ ಬಂದಿರುತ್ತದೆ.<br><br>ಸ್ವಾತಂತ್ರ್ಯ ಬಂದಾಗಿನಿಂದಲೂ ಜಹಗೀರುದಾರರು, ಇನಾಮುದಾರರು, ಜಮೀನ್ದಾರರು ಇನ್ನೂ ಮುಂತಾದವರ ಭೂಮಿಯ ಮೇಲಿನ ಎಲ್ಲಾ ವಿಶೇಷ ಹಿಡುವಳಿ ಹಕ್ಕನ್ನು ರದ್ದುಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು. ಈ ಸಂಬಂಧದಲ್ಲಿನ ಶಾಸನಾತ್ಮಕ ಕ್ರಮವನ್ನು ಹಿಂದಿನ ಮೈಸೂರು ರಾಜ್ಯದಲ್ಲಿ ಪೂರ್ಣಗೊಳಿಸಲಾಗಿದ್ದು, ರಾಜ್ಯ ವಿಧಾನಮಂಡಲವು ವಿಧೇಯಕವೊಂದನ್ನು ಅಂಗೀಕರಿಸಿತ್ತು. ಸದರಿ ವಿಧೇಯಕವು ಹಿಂದಿನ ಸಂಡೂರು ಪ್ರದೇಶಲ್ಲಿನ ವೈಯಕ್ತಿಕ ಮತ್ತು ಧಾರ್ಮಿಕ ಹಾಗೂ ಧರ್ಮಾರ್ಥ ಇನಾಮು ರದ್ದತಿಯನ್ನು ನಿಶ್ಚಿತಪಡಿಸಲು ಉದ್ದೇಶಿಸಲಾಗಿತ್ತು. ಈ ಎಲ್ಲಾ ಇನಾಂ ಜಮೀನುಗಳು ಅಧಿನಿಯಮದ ಅಡಿಯಲ್ಲಿ ಅಧಿಸೂಚಿತವಾಗುವ ದಿನಾಂಕದಿಂದ ಸರ್ಕಾರದಲ್ಲಿ ನಿಹಿತವಾಗಿರುತ್ತವೆ. ಆದರೆ ಸದರಿ ಇನಾಂ ಜಮೀನುಗಳ ಮರು-ಮಂಜೂರಾತಿಗೆ ಅರ್ಜಿ ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ಆದಾಗ್ಯೂ ಸುಮಾರು ಇನಾಂದಾರರು ಮರು-ಮಂಜೂರಾತಿಗೆ ಅರ್ಜಿ ಸಲ್ಲಿಸಿರುವುದಿಲ್ಲ.<br><br>ಈ ಹಿನ್ನೆಲೆಯಲ್ಲಿ, ಇನಾಂ ಜಮೀನು ಉಳುಮೆ ಮಾಡುತ್ತಿರುವ ಇನಾಂದಾರರಿಗೆ ಅಧಿಭೋಗದಾರಿಕೆ ಹಕ್ಕಿಗಾಗಿ ಅಂದರೆ ಇನಾಂ ಜಮೀನುಗಳನ್ನು ರೀ-ಗ್ರಾಂಟ್ ಮಾಡುವ ಸಲುವಾಗಿ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಕಾಲಾವಕಾಶವನ್ನು ಕಲ್ಪಿಸುವ ಸದುದ್ದೇಶದಿಂದ ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಎಲ್ 52 ಶಾಸನ 2021 ದಿನಾಂಕ: 18.01.2022 ರಲ್ಲಿ ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976 ಕ್ಕೆ ತಿದ್ದುಪಡಿ ತಂದು ಇನಾಂ ಜಮೀನು ರೀ-ಗ್ರಾಂಟ್‌ಗಾಗಿ ಅರ್ಜಿ ಸಲ್ಲಿಸಲು ಒಂದು ವರ್ಷ ಕಾಲಾವಧಿ ವಿಸ್ತರಿಸಿ ಆದೇಶಿಸಿದೆ. |

| | | |
|---|---|---|
| (ಆ) | ಈ ಆಕ್ಟ್‌ನ ಅಡಿಯಲ್ಲಿ ಸರ್ಕಾರದ ವಶಕ್ಕೆ ಬಂದ ಭೂಮಿ ಎಷ್ಟು ಹಾಗೂ ರೈತರಿಗೆ ನೀಡಲಾದ ಭೂಮಿ ಎಷ್ಟು; [ವಿವರಗಳನ್ನು ನೀಡುವುದು] | ಈ ಕಾಯ್ದೆಯಡಿಯಲ್ಲಿ ಸರ್ಕಾರದ ವಶಕ್ಕೆ ಬಂದ ಜಮೀನು ಇರುವುದಿಲ್ಲ ಹಾಗೂ 7796–04 ಎಕರೆ ಜಮೀನನ್ನು ಸದರಿ ಕಾಯ್ದೆಯಡಿ ರೈತರಿಗೆ ಮರು ಮಂಜೂರಾತಿ ಮಾಡಲಾಗಿದೆ. |
| (ಇ) | ಈ ಇನಾಂ ಆಕ್ಟ್‌ನ ಪ್ರಕಾರವಾಗಿ ರೈತರಿಗೆ ಹಂಚಿಕೆ ಮಾಡಿದ ಭೂಮಿಯ ಹಕ್ಕನ್ನು ಆಯಾ ರೈತರಿಗೆ ನೀಡಲಾಗಿದೆಯೇ; ಇವರುಗಳ ಹೆಸರಿಗೆ ಖಾತೆ/ಪಹಣಿಗಳನ್ನು ಮಾಡಿಕೊಡಲಾಗಿದೆಯೇ; [ವಿವರ ನೀಡುವುದು] | ಸದರಿ ಇನಾಂ ಕಾಯ್ದೆಯ ಪ್ರಕಾರವಾಗಿ ರೈತರಿಗೆ ಹಂಚಿಕೆ ಮಾಡಿದ ಜಮೀನಿನ ಹಕ್ಕನ್ನು ಆಯಾ ರೈತರಿಗೆ ನೀಡಲಾಗಿದೆ. ಸದರಿಯವರುಗಳ ಹೆಸರಿಗೆ ಖಾತೆ/ಪಹಣಿಗಳನ್ನು ಮಾಡಲಾಗಿದೆ. |
| (ಈ) | ಈ ಕುರಿತಾಗಿ ನ್ಯಾಯಾಲಯದಲ್ಲಿ ಪ್ರಕರಣಗಳು ಇವೆಯೇ; [ಮಾಹಿತಿ ಒದಗಿಸುವುದು] | ಮಾನ್ಯ ನ್ಯಾಯಾಲಯದಲ್ಲಿ ಎರಡು ಪ್ರಕರಣಗಳು ಈ ಕೆಳಗಿನಂತೆ ಇರುತ್ತವೆ:<br>(1) ಸೋಮಲಾಪುರ ಗ್ರಾಮದ ಸ.ನಂ.75 ರಲ್ಲಿನ 6–85 ಎಕರೆ/ಸೆಂಟ್ಸ್<br>(2) ಚಿಕ್ಕಾಂತಪುರ ಗ್ರಾಮದ ಸ.ನಂ.181ಎ ರಲ್ಲಿನ 0–77 ಎಕರೆ/ಸೆಂಟ್ಸ್ ಮತ್ತು ಸ.ನಂ.181ಬಿ ರಲ್ಲಿನ 0–97 ಎಕರೆ/ಸೆಂಟ್ಸ್ ಹಾಗೂ ಸ.ನಂ.182ರಲ್ಲಿನ 0–72 ಎಕರೆ/ಸೆಂಟ್ಸ್ |

ಸಂಖ್ಯೆ: ಕಂಇ 07 ಎಲ್‌ಆರ್‌ಎಸ್ 2022

(ಆರ್.ಅಶೋಕ)
ಕಂದಾಯ ಸಚಿವರು